ಫ್ಯಾಕ್ಸ್ : 080 – 2202 8041 ದೂರವಾಣಿ : 080 – 2202 8032

ಕರ್ನಾಟಕ ಸರ್ಕಾರ

*ವಾರ್ತಾ ಇಲಾಖೆ*

ವಾರ್ತಾ ಸೌಧ, ಸಂಖ್ಯೆ : 17, ಭಗವಾನ್ ಮಹಾವೀರ ರಸ್ತೆ, ಬೆಂಗಳೂರು – 560 001

ಸಂಖ್ಯೆ: ವಾಇ : ಸುಮಪ : ಪ ಪ್ರ : 2014–15 : ಜುಲೈ 8 , 2014

ಪತ್ರಿಕಾ ಪ್ರಕಟಣೆ

## ರೈಲ್ವೆ ಬಜೆಟ್, ನಿರಾಶಾದಾಯಕ, ಖಾಸಗಿಯವರಿಗೆ ಒಪ್ಪಿಸುವ ಹುನ್ನಾರದ ಮುನ್ಸೂಚನೆ : ಸಿದ್ದರಾಮಯ್ಯ

ಬೆಂಗಳೂರು, ಜುಲೈ 8 (ಕರ್ನಾಟಕ ವಾರ್ತೆ) :

ಕೇಂದ್ರ ರೈಲ್ವೆ ಬಜೆಟ್ ನಿರಾಶಾದಾಯಕವಾಗಿದೆ. ಇದು ರೈಲ್ವೆ ಮಂತ್ರಾಲಯವನ್ನೇ ಖಾಸಗಿಯವರಿಗೆ ಒಪ್ಪಿಸುವ ಹುನ್ನಾರದ ಮುನ್ಸೂಚನೆಯಂತಿದೆ. ಅಲ್ಲದೆ, ಹೊಸತೇನೂ ಇಲ್ಲದ ಈ ಬಜೆಟ್‌ನಲ್ಲಿ ಜನಸಾಮಾನ್ಯರಿಗೆ ಹಿತವಾದದೂ ಯಾವುದೂ ಇಲ್ಲ ಎಂದು ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರು ಇಲ್ಲಿ ಇಂದು ಪ್ರಕಟಿಸಿದ್ದಾರೆ.

ತಮ್ಮ ಬಜೆಟ್ ಪೂರ್ವದಲ್ಲಿಯೇ ಪ್ರಯಾಣದರವನ್ನು ಶೇಕಡಾ 14 ರಷ್ಟು ಹೆಚ್ಚಿಸಿ ಜನಸಾಮಾನ್ಯರ ಮೇಲೆ ದೊಡ್ಡ ಹೊರೆಯನ್ನೇ ಹೊರಿಸಿದ್ದ ಕೇಂದ್ರ ರೈಲ್ವೆ ಸಚಿವ ಶ್ರೀ ಡಿ. ವಿ. ಸದಾನಂದ ಗೌಡ ಅವರು ಲೋಕಸಭೆಯಲ್ಲಿ ಇಂದು ಮಂಡಿಸಿದ 2014–15 ನೇ ಸಾಲಿನ ರೈಲ್ವೆ ಬಜೆಟ್‌ನಲ್ಲಿ ಭಾರತೀಯ ರೈಲ್ವೆಯ ಖಾಸಗೀಕರಣಕ್ಕೆ ಹೆಚ್ಚು ಒತ್ತು ನೀಡಿರುವುದು ಕಳವಳಕಾರಿ ಬೆಳವಣಿಗೆಯಾಗಿದೆ. ಸಾರ್ವಜನಿಕ ಹಾಗೂ ಖಾಸಗಿ ಸಹಭಾಗಿತ್ವ ಯೋಜನೆಗಳ ಅನುಷ್ಠಾನಕ್ಕೆ ಚಾಲನೆ ನೀಡುವುದರಿಂದ ರೈಲ್ವೆ ತನ್ನ ಆರ್ಥಿಕ ಹಾಗೂ ಜವಾಬ್ದಾರಿಯ ಹೊಣೆಯನ್ನು ವರ್ಗಾವಣೆಮಾಡಿದಂತಾಗುತ್ತಿದೆ. ರೈಲು ಜನಸಾಮಾನ್ಯರ ಸಾರಿಗೆ ವ್ಯವಸ್ಥೆ. ಇಲ್ಲಿ ಲಾಭ ನಷ್ಟಗಳ ಲೆಕ್ಕಾಚಾರ ಇರಕೂಡದು ಎಂದು ಮುಖ್ಯಮಂತ್ರಿ ಪ್ರತಿಕ್ರಿಯಿಸಿದ್ದಾರೆ.

ಒಂದೆರಡು ರೈಲ್ವೇ ನಿಲ್ದಾಣಗಳನ್ನು ಅಂತಾರಾಷ್ಟ್ರೀಯ ದರ್ಜೆಗೇರಿಸುವುದಾಗಿ ರೈಲ್ವೆ ಸಚಿವರು ಪ್ರಕಟಿಸಿದ್ದಾರೆ. ಕೇವಲ ಒಂದೆರಡು ರೈಲ್ವೆ ನಿಲ್ದಾಣಗಳನ್ನು ಅಂತಾರಾಷ್ಟ್ರೀಯ ದರ್ಜೆಗೇರಿಸುವುದರಿಂದ ಯಾವುದೇ ಪ್ರಯೋಜನವಾಗುವುದಿಲ್ಲ. ಎಲ್ಲಾ ರಾಜ್ಯಗಳಲ್ಲಿನ ರಾಜಧಾನಿಗಳಲ್ಲಿ ಹಾಗೂ ಪ್ರಮುಖ ನಗರಗಳಲ್ಲಿನ ರೈಲ್ವೇ ನಿಲ್ದಾಣಗಳಲ್ಲಿ ಪ್ರಯಾಣಿಕರಿಗೆ ಲಭಿಸುತ್ತಿರುವ ಸೌಲಭ್ಯಗಳು ಸುಧಾರಣೆಯಾಗಬೇಕು ಎಂದು ಶ್ರೀ ಸಿದ್ಧರಾಮಯ್ಯ ಅವರು ಆಶಿಸಿದ್ದಾರೆ.

ಕೇಂದ್ರ ರೈಲ್ವೇ ಸಚಿವರೇ ಕರ್ನಾಟಕದವರಾದರೂ, ಕರ್ನಾಟಕಕ್ಕೆ ಜನಸಾಧಾರಣ ರೈಲು ಘೋಷಿಸಿಲ್ಲ. ಕರ್ನಾಟಕಕ್ಕೆ ಯಾವುದೇ ಹೊಸ ಹವಾನಿಯಂತ್ರಿತ ಹಾಗೂ ಎಕ್ಸ್‌ಪ್ರೆಸ್ ರೈಲುಗಳಿಲ್ಲ. ಬೈಂದೂರು ಹಾಗೂ ಕಾಸರಗೋಡು ಮತ್ತು ಯಶವಂತಪುರ ಹಾಗೂ ತುಮಕೂರು ನಡುವೆ ಅತ್ಯಂತ ಕಡಿಮೆ ದೂರದ ರೈಲುಗಳ ಚಾಲನೆಗೆ ರೈಲ್ವೆ ಸಚಿವರು ಪ್ರಸ್ತಾಪಿಸಿದ್ದಾರೆ. ಪ್ರಸ್ತುತ ಇರುವ ರೈಲುಗಳ ವಿಸ್ತರಣೆಯಲ್ಲೂ ಕೇಂದ್ರ ರೈಲ್ವೆ ಸಚಿವರು ಕರ್ನಾಟಕವನ್ನು ಮರೆತಿದ್ದಾರೆ ಎಂದೆನಿಸುತ್ತದೆ.

ಎಕ್ಸ್‌ಪ್ರೆಸ್ ರೈಲುಗಳಲ್ಲಿ ಪ್ರತಿದಿನದ ಬೆಂಗಳೂರು–ಮಂಗಳೂರು, ವಾರಕ್ಕೆ ಎರಡು ದಿನ ಬೆಂಗಳೂರು–ಶಿವಮೊಗ್ಗ ಹಾಗೂ ವಾರಕ್ಕೊಮ್ಮೆ ಬೀದರ್–ಮುಂಬೈ ಹಾಗೂ ಟಾಟಾನಗರ–ಬೈಯ್ಯಪ್ಪನಹಳ್ಳಿ ನಡುವೆ ರೈಲು ಸಂಚಾರಕ್ಕೆ ಅನುವು ಮಾಡಿಕೊಟ್ಟಿದ್ದಾರೆ. ಕೇಂದ್ರ ರೈಲ್ವೇ ಸಚಿವರು ಮೈಸೂರು – ಬೆಂಗಳೂರು ಹಾಗೂ ಚೆನ್ನೈ ನಡುವೆ ಬುಲೆಟ್ ಟ್ರೈನ್ ಪ್ರಸ್ತಾಪ ಮಾಡಿದ್ದಾರೆ. ಆದರೆ, ಇದು ರೈಲ್ವೇ ಸಚಿವರ ಕರ್ನಾಟಕದ ಪರ ಕಾಳಜಿಯೋ ಅಥವಾ ತಮಿಳುನಾಡು ಪರ ಕಾಳಜಿಯೋ ಅರ್ಥವಾಗುತ್ತಿಲ್ಲ ಎಂದು ಶ್ರೀ ಸಿದ್ದರಾಮಯ್ಯ ಅವರು ತಮ್ಮ ಪ್ರತಿಕ್ರಿಯೆಯಲ್ಲಿ ತಿಳಿಸಿದ್ದಾರೆ.

*************

ಡಿ ಪಿ ಎಂ